# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 236 |
| ಸದಸ್ಯರ ಹೆಸರು | : | ಶ್ರೀ ಅ. ದೇವೇಗೌಡ, (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 14-09-2022 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಪ್ರಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ದೊಡ್ಡಬಳ್ಳಾಪುರ-ಯಲಹಂಕ ಮಾರ್ಗ ಮಧ್ಯೆ ಬರುವ ಮಾರಸಂದ್ರದಿಂದ, ದೊಡ್ಡಬಳ್ಳಾಪುರ ತಾಲ್ಲೂಕು ಕಾಡನೂರು ಕೈಮರಗೇಟ್ ಮೂಲಕ ಚೆನ್ನಾದೇವಿ ಅಗ್ರಹಾರಕ್ಕೆ ಹೋಗುವ ರಸ್ತೆ ಡಾಂಬರೀಕರಣ ಕಾಮಗಾರಿ 2016-17 ರಲ್ಲಿ ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ರೂ.40.00 ಕೋಟಿಗಳಿಗೆ ಅನುಮೋದನೆ ನೀಡಿರುವುದು ನಿಜವೇ; | ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯವು 2016-17ನೇ ಸಾಲಿನ ಕೇಂದ್ರ ರಸ್ತೆ ನಿಧಿಯಡಿಯಲ್ಲಿ ದೊಡ್ಡಬಳ್ಳಾಪುರ-ಯಲಹಂಕ ಮಾರ್ಗ ಮಧ್ಯ ಬರುವ ಮಾರಸಂದ್ರದಿಂದ, ದೊಡ್ಡಬಳ್ಳಾಪುರ ತಾಲ್ಲೂಕು ಕಾಡನೂರು ಕೈಮರಗೇಟ್ ಮೂಲಕ ಚೆನ್ನಾದೇವಿ ಅಗ್ರಹಾರಕ್ಕೆ ಹೋಗುವ ರಸ್ತೆ ಡಾಂಬರೀಕರಣ ಕಾಮಗಾರಿಯನ್ನು ರೂ.40.00 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಅನುಮೋದನೆ ನೀಡಿರುತ್ತದೆ. |
| ಆ) | ಕಾಮಗಾರಿಯು ಪೂರ್ಣಗೊಂಡಿಯೇ; ಅಂದಾಜಿನಲ್ಲಿರುವ ದೊಡ್ಡಬಳ್ಳಾಪುರ ತಾಲ್ಲೂಕಿಗೆ ಬರುವ ದೊಡ್ಡತುಮಕೂರು ಗ್ರಾಮದಿಂದ ಗೌಡಹಳ್ಳಿ ಗ್ರಾಮದವರೆಗೆ ಕೆರೆ ಏರಿ ಅಭಿವೃದ್ಧಿ ಮತ್ತು ಡಾಂಬರೀಕರಣ ಹಾಗೂ ಕೆರೆಯ ಎರಡು ಕಡೆಗೆ ಮೆಟಲ್‌ಕ್ರಾಷ್ ಬ್ಯಾರಿಯರ್ ತಡೆಗೋಡೆ ನಿರ್ಮಿಸುವ ಕಾಮಗಾರಿ 1 ವರ್ಷಗಳಿಂದ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಪ್ರಸ್ತುತ ಅಧಿಕ ಮಳೆಯಿಂದಾಗಿ ರಸ್ತೆ ಸಂಪೂರ್ಣವಾಗಿ ಹಾಳಾಗಿದ್ದು, ವಾಹನಗಳು, ಸ್ಥಳೀಯರು ಓಡಾಡದಂತಾಗಿದ್ದು, ಅಪಘಾತವು ಸಂಭವಿಸುತ್ತಿದ್ದು, ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ಅನುದಾನ ಬಿಡುಗಡೆ ಆಗಿದ್ದರೂ ಸಹ ಈವರೆವಿಗೂ ಕಾಮಗಾರಿಯನ್ನು ಪೂರ್ಣಗೊಳಿಸದಿರಲು ಕಾರಣವೇನು; | ಸದರಿ ಕಾಮಗಾರಿಯಲ್ಲಿರುವ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿರುವ ದೊಡ್ಡತುಮಕೂರು ಗ್ರಾಮದಿಂದ ಗೌಡಹಳ್ಳಿ ಗ್ರಾಮದವರೆಗಿನ ಕೆರೆ ಏರಿ ಅಗಲೀಕರಣ ಕಾಮಗಾರಿಯು ಅನುದಾನದ ಕೊರತೆಯಿಂದಾಗಿ, ಕೋವಿಡ್-19ರ ಲಾಕ್‌ಡೌನ್‌ನಿಂದಾಗಿ ಹಾಗೂ ಇತ್ತೀಚಿನ ಭಾರೀ ಮಳೆಯಿಂದಾಗಿ ಕಾಮಗಾರಿಯು ಪೂರ್ಣ ಗೊಂಡಿರುವುದಿಲ್ಲ. ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br><br>ಕಾಮಗಾರಿಯ ಅಂದಾಜಿನಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿಗೆ ಬರುವ ದೊಡ್ಡತುಮಕೂರು ಗ್ರಾಮದಿಂದ ಗೌಡಹಳ್ಳಿ ಗ್ರಾಮದವರೆಗೆ ಕೆರೆ ಏರಿ ಅಭಿವೃದ್ಧಿ ಮತ್ತು ಡಾಂಬರೀಕರಣ ಹಾಗೂ ಕೆರೆಯ ಎರಡು ಕಡೆಗೆ ಮೆಟಲ್‌ಕ್ರಾಷ್ ಬ್ಯಾರಿಯರ್ ತಡೆಗೋಡೆ ನಿರ್ಮಿಸುವ ಕಾಮಗಾರಿ ಸೇರಿರುತ್ತದೆ. ಹಾಗೂ 1 ವರ್ಷದಿಂದ ಕಾಮಗಾರಿ ಸ್ಥಗಿತಗೊಂಡಿರುವುದಿಲ್ಲ, ಇತರೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br><br>ಆದರೆ ಇತ್ತೀಚಿನ ಭಾರೀ ಮಳೆಯಿಂದಾಗಿ ಕಾಮಗಾರಿಯು ಕೈಗೊಳ್ಳುವಲ್ಲಿ ಅಡೆತಡೆಯಾಗಿರುತ್ತದೆ.<br><br>ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡತುಮಕೂರು ಹಾಗೂ ಗೌಡಹಳ್ಳಿ ಗ್ರಾಮಗಳ ನಡುವಿನ ಕೆರೆ ಏರಿಯ ಅಗಲೀಕರಣ ಕಾರ್ಯವು ಭಾಗಶಃ ಪೂರ್ಣಗೊಳ್ಳುವ |

| | | |
|---|---|---|
| | | ಹಂತದಲ್ಲಿದ್ದು, ಅಗಲೀಕರಣ ಕಾರ್ಯವು ಪೂರ್ಣಗೊಂಡ ತಕ್ಷಣ ಡಾಂಬರೀಕರಣ ಹಾಗೂ ಕೆರೆ ಏರಿ ಎರಡು ಕಡೆಗೆ ಮೆಟಲ್ ಕ್ರಾಷ್ ಬ್ಯಾರಿಯರ್‌ನಿಂದ ತಡೆಗೋಡೆ ನಿರ್ಮಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು. |
| ಇ) | ಈ ಕಾಮಗಾರಿಯನ್ನು ಆದ್ಯತೆ ಮೇಲೆ ಮತ್ತೆ ಪ್ರಾರಂಭಿಸಲು ಹಾಗೂ ಮುಕ್ತಾಯಗೊಳಿಸಲು ಸರ್ಕಾರಕ್ಕೆ ಇನ್ನೆಷ್ಟು ತಿಂಗಳುಗಳ ಕಾಲಾವಕಾಶ ಬೇಕು; ಸರ್ಕಾರ ಈ ಬಗ್ಗೆ ಕ್ರಮ ಕೈಗೊಂಡಿದೆಯೇ? | ದೊಡ್ಡಬಳ್ಳಾಪುರ ತಾಲ್ಲೂಕಿಗೆ ಬರುವ ದೊಡ್ಡತುಮಕೂರು ಗ್ರಾಮದಿಂದ ಗೌಡಹಳ್ಳಿ ಗ್ರಾಮದವರೆಗೆ ಕೆರೆಏರಿ ಅಭಿವೃದ್ಧಿ ಮತ್ತು ಡಾಂಬರೀಕರಣ ಹಾಗೂ ಕೆರೆಯ ಎರಡು ಕಡೆಗೆ ಮೆಟಲ್ ಕ್ರಾಷ್ ಬ್ಯಾರಿಯರ್ ತಡೆಗೋಡೆ ನಿರ್ಮಿಸುವ ಕಾಮಗಾರಿಯನ್ನು 2 ತಿಂಗಳಲ್ಲಿ ಪೂರ್ಣಗೊಳಿಸಲು ಸೂಕ್ತ ಕ್ರಮ ವಹಿಸಲಾಗುವುದು. |

ಕಡತ ಸಂಖ್ಯೆ: ಲೋಇ 31 ಸಿಆರ್‌ಎಫ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು